ಅ) ಬಂದಿದ್ದಲ್ಲಿ, ಈ ಗ್ರಾಮಕ್ಕೆ ಆರೋಗ್ಯ ಕೇಂದ್ರ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

ಇ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು ?

ಶ್ರೀ ಅರವಿಂದ ಲಿಂಬಾವಾಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ), ಆ) ಮತ್ತು ಇ) ಹಾಸನ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ 2,29,711 ಆಗಿದ್ದು, ಮಾರ್ಗಸೂಚಿಗಳ ಪ್ರಕಾರ 8 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶವಿದೆ. ಆದರೆ, ಈಗಾಗಲೇ ಸದರಿ ತಾಲ್ಲೂಕಿನಲ್ಲಿ 19 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಆದುದರಿಂದ, ಹಾಸನ ತಾಲ್ಲೂಕು ಕಟ್ಟಾಯ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಮುಂದುವರೆದು, ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿ ಮೇಲ್ದರ್ಜೆಗೇರಿಸುವಿಕೆಯನ್ನು ಒಂದು ನೀತಿ ನಿರ್ಣಯವಾಗಿ ದಿನಾಂಕ : 11–01–2011 ರಿಂದ ಮೂರು ವರ್ಷಗಳ ಅವಧಿಗೆ ಸರ್ಕಾರವು ತಡೆ ಹಿಡಿದಿದೆ.

ಮಲೈ ಮಹದೇಶ್ವರ ಬೆಟ್ಟಕ್ಕೆ ಕುಡಿಯುವ ನೀರು

248 (417) ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. :– ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಾವೇರಿ ನದಿಯಿಂದ ಮಲೈ ಮಹದೇಶ್ವರ ಬೆಟ್ಟಕ್ಕೆ ಕುಡಿಯುವ ನೀರು ಒದಗಿಸುವ ಯೋಜನೆ ಸರ್ಕಾರದ ಮುಂದಿದೆಯೇ ;

ಅ) ಹಾಗಿದ್ದರೆ, ಈಗ ಯಾವ ಹಂತದಲ್ಲಿದೆ ;

ಇ) ಪೂರ್ಣಗೊಳಿಸಲು ಎಷ್ಟು ದಿವಸ ಬೇಕಾಗುತ್ತದೆ ;

ಈ) ಈವರೆವಿಗೆ ಎಷ್ಟು ಹಣ ವೆಚ್ಚ ಮಾಡಲಾಗಿದೆ ; ಯಾವ ಯಾವ ಕಾಮಗಾರಿ ಕೈಗೊಳ್ಳಲಾಗಿದೆ ; (ವಿವರ ನೀಡುವುದು)

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು):–

ಅ) ಹೌದು.

ಆ) ಕಾಮಗಾರಿಗಳು ಪ್ರಗತಿಯಲ್ಲಿವೆ.

ಇ) ಬಾಕಿ ಉಳಿದಿರುವ ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಇದುವರೆಗೆ ಒಟ್ಟು ರೂ. 17,52,80,000–00 ವೆಚ್ಚ ಉಂಟಾಗಿದ್ದು, ಆ ಸಂಬಂಧ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ–1

ಕಾವೇರಿ ನದಿಯಿಂದ ಮಲೈ ಮಹದೇಶ್ವರ ಬೆಟ್ಟಕ್ಕೆ ಕುಡಿಯುವ ನೀರು ಒದಗಿಸುವ ಯೋಜನೆಯಲ್ಲಿ ಈವರೆವಿಗೆ ಕಾಮಗಾರಿಯಲ್ಲಿ ಆಗಿರುವ ಪ್ರಗತಿಯ ವಿವರ

1. **ಮೂಲಸ್ಥಾವರ :–**

ಅ) 400 ಮೀ.ವ್ಯಾಸದ ಸಂಪರ್ಕ ಕೊಳವೆ ಮಾರ್ಗ ; ಕಾಮಗಾರಿ ಪೂರ್ಣಗೊಂಡಿದೆ.

ಆ) ಜಾಕ್‌ವೆಲ್ :– ಕಾಮಗಾರಿ ಮುಗಿದಿದ್ದು, ಪೇಂಟಿಂಗ್ ಕೆಲಸ ಬಾಕಿ ಇರುತ್ತದೆ.

ಇ) ಅಪ್ರೋಚ್‌ನ ಬಂಡ್ ಕಾಮಗಾರಿ ಮುಗಿದಿದ್ದು ರಿವೆಟ್‌ಮೆಂಟ್ ಕಾಮಗಾರಿ ಪ್ರಗತಿಯಲ್ಲಿದೆ.

ಈ) ಇನ್ಸ್‌ಪೆಕ್ಷನ್ ಛೇಂಬರ್ :– ಕಾಮಗಾರಿ ಸಂಪೂರ್ಣ ಪೂರ್ಣಗೊಂಡಿದೆ.

2. **219 ಮಿ.ಮೀ. ವ್ಯಾಸದ ಮೆದು ಉಕ್ಕಿನ ಏರು ಕೊಳವೆ ಮಾರ್ಗ :–**

ಅ) ಜಾಕ್‌ವೆಲ್‌ನಿಂದ ಮೊದಲನೆ ಪಂಪಿನ ಮನೆವರೆಗೆ :– ಕೊಳವೆ ಮಾರ್ಗದ ಅಳವಡಿಕೆ ಕಾಮಗಾರಿ ಮುಗಿದಿರುತ್ತದೆ.

ಆ) ಮೊದಲನೆ ಪಂಪಿನ ಮನೆಯಿಂದ 2ನೇ ಪಂಪಿನ ಮನೆವರೆಗೆ :– ಕೊಳವೆ ಮಾರ್ಗದ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿದ್ದು, ಜೋಡಣೆ ಕಾಮಗಾರಿ ಬಾಕಿ ಇರುತ್ತದೆ.

ಇ) ಎರಡನೇ ಪಂಪಿನ ಮನೆಯಿಂದ :– ಜಲ ಸಂಗ್ರಹಗಾರದವರೆಗೆ :– ಕೊಳವೆ ಮಾರ್ಗದ ಅಳವಡಿಕೆ ಮುಗಿದಿದ್ದು ಜೋಡಣಾ ಕಾಮಗಾರಿ ಪ್ರಗತಿಯಲ್ಲಿದೆ.

3. **ಮೊದಲನೇ ಪಂಪಿನ ಮನೆ :–**

ಒಂದು ಲಕ್ಷ ಲೀಟರ್ ಸಾಮರ್ಥ್ಯದ ಜಲ ಸಂಗ್ರಹಗಾರದ ಕಾಮಗಾರಿ ಮುಗಿದಿದ್ದು, ಪಂಪಿನ ಮನೆಯ ಕಾಮಗಾರಿ ಪೂರ್ಣಗೊಂಡಿರುತ್ತದೆ.

4. **ಎರಡನೇ ಪಂಪಿನ ಮನೆ :–**

ಒಂದು ಲಕ್ಷ ಲೀಟರ್ ಸಾಮರ್ಥ್ಯದ ಜಲಸಂಗ್ರಹಾಗಾರದ ಕಾಮಗಾರಿ ಮುಗಿದಿದ್ದು, ಪಂಪಿನ ಮನೆಗೆ ಮೇಲ್ಚಾವಣಿ ಫಿನಿಷಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.

5. **90 ಲಕ್ಷ ಲೀಟರ್ ಸಾಮರ್ಥ್ಯದ ನೆಲಮಟ್ಟದ ಜಲ ಸಂಗ್ರಹಗಾರ :–**

ಕಾಮಗಾರಿ ಪೂರ್ಣಗೊಂಡಿರುತ್ತದೆ.

6. **ಜಲ ಶುದ್ಧೀಕರಣ ಘಟಕ :–**

ಯಾಂತ್ರಿಕ ಹಾಗೂ ವಿದ್ಯುದೀಕರಣ ಕಾಮಗಾರಿಗಳು ಪ್ರಗತಿಯಲ್ಲಿದೆ.

7. **ವಿದ್ಯುತ್ತೀಕರಣಾ ಕಾಮಗಾರಿ :–**

ಯೋಜನೆ ಅಡಿಯ ಸ್ಥಾವರಗಳಿಗೆ ವಿದ್ಯುತ್ ಸರಬರಾಜು ನೀಡಲು ಚಾ.ವಿ.ಸ.ನಿ.ನಿ. ಯಿಂದ ಅನುಮೋದನೆ ಪಡೆಯಲಾಗಿದ್ದು, ಕಾಮಗಾರಿಯನ್ನು ಮೆ॥ ಪದ್ಮಶ್ರೀ ಎಲೆಕ್ಟ್ರಿಕಲ್ಸ್ ಗುತ್ತಿಗೆದಾರರು, ಸಾಗರ ಇವರ ಪರವಾಗಿ ಟೆಂಡರ್ ಅನುಮೋದನೆ ದೊರೆತಿದ್ದು ಸದರಿಯವರು ಕರಾರು ಪತ್ರ ಮಾಡಿಕೊಂಡಿದ್ದು ಕಾಮಗಾರಿ ಪ್ರಾರಂಭಿಸಬೇಕಿದೆ.

8. **ಯಂತ್ರೋಪಕರಣ ಕಾಮಗಾರಿ :–**

ಜಾಕ್‌ವೆಲ್ ಮೊದಲನೇ ಪಂಪಿನ ಮನೆ, ಎರಡನೇ ಪಂಪಿನ ಮನೆ ಹಾಗೂ ಜಲಶುದ್ಧೀಕರಣ ಘಟಕದ ಶುದ್ಧ ನೀರಿನ ಪಂಪಿನ ಮನೆಗಳಿಗೆ ಅಳವಡಿಸಬೇಕಾಗಿರುವ ಯಂತ್ರೋಪಕರಣಗಳ ಕಾಮಗಾರಿ ಕೈಗೊಳ್ಳಲು ದಿನಾಂಕ : 05–03–2012 ರಂದು ಗುತ್ತಿಗೆ ಕರಾರು ಮಾಡಿಕೊಳ್ಳಲಾಗಿದ್ದು, ಗುತ್ತಿಗೆದಾರರಿಗೆ ದಿನಾಂಕ : 05–03–2012ರಂದು ನಿವೇಶನ ಹಸ್ತಾಂತರಿಸಲಾಗಿದ್ದು, ಉಪಕರಣಗಳಿಗೆ ಅಬ್ಕಾರಿ ಶುಲ್ಕ ವಿನಾಯಿತಿಯನ್ನು ಚಾಮರಾಜನಗರ ಜಿಲ್ಲಾಧಿಕಾರಿಯವರಿಂದ ಪಡೆದು

ಗುತ್ತಿಗೆದಾರರಿಗೆ ನೀಡಲಾಗಿದ್ದು ಗುತ್ತಿಗೆದಾರರು ಪಂಪಿಂಗ್ ಮಿಷಿನರಿಗಳನ್ನು ಪಡೆಯಲು ಸರಬರಾಜು ಆದೇಶ ನೀಡಿರುತ್ತಾರೆ.

ಮುಳಗಡೆ ಗ್ರಾಮದ ಶಾಲೆಗಳ ದುಃಸ್ಥಿತಿ

239 (179) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ (ಜಮಖಂಡಿ). :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕೃಷ್ಣಾ ನದಿಯ 519.6 ಮೀ ಹಿನ್ನೀರಿನಿಂದ ಮುಳುಗಡೆಯಾದ ಜಮಖಂಡಿ ತಾಲ್ಲೂಕಿನ ಗ್ರಾಮಗಳಲ್ಲಿಯ ಪ್ರಾಥಮಿಕ ಶಾಲೆಗಳ ದುಃಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಅ) ಅನೇಕ ಶಾಲೆಗಳು ಸಂಪೂರ್ಣ ಕುಸಿದುಹೋಗಿದ್ದು ಜೀವಹಾನಿಯಾಗಬಹುದಾದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಈ ಗ್ರಾಮಗಳ ಶಾಲೆಯ ರಿಪೇರಿ ಹಾಗೂ ಅಗತ್ಯವಾದ ಹೊಸ ಕೊಠಡಿಗಳನ್ನು ಯಾವಾಗ ನಿರ್ಮಿಸಲಾಗುವುದು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಬಂದಿದೆ. ಕೃಷ್ಣಾ ನದಿ ಯೋಜನೆಯ ಹಿನ್ನೀರಿನಿಂದ ಜಮಖಂಡಿ ತಾಲ್ಲೂಕಿನ 15 ಗ್ರಾಮಗಳು ಮುಳಗಡೆ ವ್ಯಾಪ್ತಿಯಲ್ಲಿ ಬರುತ್ತಿದ್ದು, ಸದರಿ ಗ್ರಾಮಗಳಲ್ಲಿ ಶಾಶ್ವತ ಕಾಮಗಾರಿಗಳನ್ನು ಕೈಗೊಳ್ಳದಂತೆ ಮಾನ್ಯ ಘನ ಸರ್ಕಾರದ ನಿರ್ದೇಶನವಿರುದರಿಂದ ಶಾಶ್ವತ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.

ಆ) ಬಂದಿದೆ. ಆದರೆ ಪುನರ್ ವಸತಿ ಕೇಂದ್ರಗಳಲ್ಲಿನ ಹೊಸ ಕಟ್ಟಡಗಳಿಗೆ ಶಾಲೆಗಳನ್ನು ಸ್ಥಳಾಂತರಿಸಲು ಗ್ರಾಮದ ಜನ ಸಮುದಾಯವನ್ನು ಪದೆ ಪದೆ ವಿನಂತಿಸಿದಾಗ್ಯೂ ಕೂಡಾ ಗ್ರಾಮಸ್ಥರು ಮತ್ತು ಎಸ್.ಡಿ.ಎಂ.ಸಿ.ಯವರು ಅಲ್ಲಿಗೆ ಮಕ್ಕಳನ್ನು ಕಳುಹಿಸಲು ಸಿದ್ದರಿಲ್ಲದಿರುವುದರಿಂದ ಸದ್ಯಕ್ಕೆ ಅದೇ ಗ್ರಾಮದಲ್ಲಿ ಹಳೆ ಶಾಲಾ ಕಟ್ಟಡದಲ್ಲಿ ಶಾಲೆಗಳು ನಡೆಯುತ್ತಿವೆ.

ಇ) ಮುಳಗಡೆ ಗ್ರಾಮಗಳ ಪುನರ್ ವಸತಿ ಕೇಂದ್ರಗಳಲ್ಲಿ ಹೊಸ ಕಟ್ಟಡವಿದ್ದು, ಸದರಿ ಶಾಲಾ ಕಟ್ಟಡಗಳಿಗೆ ಮಕ್ಕಳನ್ನು ಸ್ಥಳಾಂತರಿಸಲು ಹಾಗೂ ಸಂಬಂಧಿಸಿದವರ